**ದಿನಾಂಕಃ 17.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ **ಪರ ಶ್ರೀ** ಎಂ ಎಸ್ **ವಕೀಲರಿಂದಃ**

ನಮ್ಮ ಕುಟುಂಬದ ವೈದ್ಯರು ಎಂದು ಯಾರು ಇರುವುದಿಲ್ಲ. ನಾನು ನಂಜಯ್ಯ ಎಂಬ ವೈದ್ಯರ ಬಳಿ ಆರೋಗ್ಯ ತಪಾಸಣೆ ಮಾಡಿಸಿರುತ್ತೇನೆ. ಸದರಿ ನಂಜಯ್ಯ ಎಂಬ ವೈದ್ಯರು ನನಗೆ ಪರಿಚಯ ಇರುವುದಿಲ್ಲ. ನಾನು 2022 ರ ಏಪ್ರಿಲ್ ತಿಂಗಳಿನಲ್ಲಿ ಸದರಿ ವೈದ್ಯರ ಬಳಿ ಹೋಗಿ ಆರೋಗ್ಯ ತಪಾಸಣೆ ಮಾಡಿಸಿರುತ್ತೇನೆ. ನಾನು ಕೊನೆಯ ಬಾರಿ ಸದರಿ ನಂಜಯ್ಯ ಎಂಬ ವೈದ್ಯರನ್ನು ಭೇಟಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. ನಾನು ಆರೋಗ್ಯವಾಗಿದ್ದರೂ ಸಹ ವೈದ್ಯರೊಂದಿಗೆ ಶಾಮೀಲಾಗಿ ನಿಪಿ-1 ರ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ನಂಜಯ್ಯ ವೈದ್ಯರು ಪರಿಚಯ ಇದ್ದುದ್ದರಿಂದ ಸದರಿ ಪರಿಚಯದ ಮೇರೆಗೆ ನಿಪಿ-1 ರ ಸುಳ್ಳು ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ದಿನಾಂಕ ಆರೋಪಿಗೆ ನಮ್ಮ ವಕೀಲರ ಮೂಲಕ ನೋಟೀಸ್ ನೀಡಿದ್ದೇನೆ ಎಂದು ನಿರ್ದಿಷ್ಟವಾಗಿ ನೆನಪಿಲ್ಲ. ಸಾಕ್ಷಿದಾರರು ಮುಂದುವರೆದು ಫೆಬ್ರವರಿ 25 ನೇ ತಾರೀಖಿನಂದು ನೋಟೀಸ್ ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ಆರೋಪಿಗೆ ಯಾವ ದಿನಾಂಕ ತಲುಪಿದೆ ಎಂದು ನನಗೆ ನೆನಪಿಲ್ಲ. ನಾನು ಈ ಪ್ರಕರಣವನ್ನು ಯಾವ ದಿನಾಂಕದಂದು ನ್ಯಾಯಾಲಯದಲ್ಲಿ ಸಲ್ಲಿಸಿದ್ದೆನು ಎಂದು ನೆನಪಿಲ್ಲ. ವಾಯಿದೆ ಮುಗಿದಿರುವ ಚೆಕ್ ನ ಮೇಲೆ ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನನಗೆ ಆಲ್ದೂರು ಗ್ರಾಮದ ಸರ್ವೆ ನಂ.28 ರಲ್ಲಿ ವ್ಯವಸಾಯದ ಜಮೀನು ಇರುತ್ತದೆ. ಸದರಿ ಸರ್ವೆ ನಂ.28 ರ 34 ಗುಂಟೆ ಜಮೀನನ್ನು ನಾನು ರೂ.3,50,000/-ಹಣಕ್ಕೆ ವನಿತಮ್ಮ ರವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು

ಬೇರೆ ಯಾರಿಗೂ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ಕಾನೂನಿನ ಪ್ರಕಾರ ರೂ.20000/- ಕ್ಕಿಂತ ಹೆಚ್ಚಿನ ಹಣವನ್ನು ಬೇರೆ ವ್ಯಕ್ತಿಗಳಿಗೆ ನೀಡುವ ಸಂಧರ್ಭದಲ್ಲಿ ಸದರಿ ಹಣವನ್ನು ಚೆಕ್ ಅಥವಾ ಡಿ ಡಿ ಮೂಲಕ ನೀಡಬೇಕು ಎಂಬ ನಿಯಮ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣವನ್ನು ಚೆಕ್ ಮೂಲಕ ನೀಡಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ನನಗೆ ಬರೆಯಲು ಬರದೇ ಇರುವುದರಿಂದ ಆರೋಪಿಯನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಬ್ಯಾಂಕಿನಿಂದ ಹಣವನ್ನು ವಿತ್ ಡ್ರಾ ಮಾಡಿ ಆರೋಪಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ನನಗೆ 000002 ಸಂಖ್ಯೆಯ ಚೆಕ್ ಅನ್ನು ನೀಡಿದ್ದರು. ಸದರಿ ಚೆಕ್ ಬೆಂಗಳೂರಿನ ಹೆಚ್ ಡಿ ಎಫ್ ಸಿ ಬ್ಯಾಂಕ್ ಗೆ ಸೇರಿದ ಚೆಕ್ ಆಗಿರುತ್ತದೆ ಎಂದು ಆರೋಪಿಯು ನನಗೆ ತಿಳಿಸಿದ್ದರು. ಸದರಿ ಬ್ಯಾಂಕಿನ ಆರೋಪಿಯ ಬ್ಯಾಂಕ್ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಸಹಿ ಮಾತ್ರ ಮಾಡುತ್ತೇನೆ. ನಿಪಿ-1ರ ಚೆಕ್ ಅನ್ನು ಯಾವ ಭಾಷೆಯಲ್ಲಿ ಬರವಣಿಗೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-1ರ ಚೆಕ್ ನಲ್ಲಿ ನಮೂದಿಸಿರುವ ಬರವಣಿಗೆಯನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು ಆರೋಪಿಯೇ ಬರೆದುಕೊಂಡು ಬಂದು ನನಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-1ರಲ್ಲಿ ಏನು ಬರೆದಿದೆ ಎಂದು ನಾನು ಬೇರೆಯವರಿಂದ ಓದಿಸಿ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಆರೋಪಿಯು ನನ್ನ ತಮ್ಮನ ಮಗಳಾಗಿದ್ದುದ್ದರಿಂದ ನಾನು ಓದಿಸಿ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಸಹಿ ಮಾಡಲು ಬರುವುದರಿಂದ ಯಾವುದೆ ದಾಖಲಾತಿಗಳಲ್ಲಿ ಬರವಣಿಗೆಗಳು ಮತ್ತು ಸಹಿ ವ್ಯತ್ಯಾಸವಿದ್ದರೆ ನನಗೆ ಗೊತ್ತಾಗುತ್ತದೆ. ನನಗೆ ಓದಲು ಮತ್ತು ಬರೆಯಲು ಬರದೇ ಇರುವುದರಿಂದ ನಿಪಿ-1ರ ದಾಖಲಾತಿಯು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು ಸದರಿ

ದಾಖಲಾತಿಯನ್ನು ಆರೋಪಿಯು ನನಗೆ ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ಒಳ್ಳೆಯ ಕೆಲಸದಲ್ಲಿ ಇದ್ದು ಮಾಸಿಕವಾಗಿ ರೂ. 1,50,000/-ಹಣವನ್ನು ಸಂಬಳ ಪಡೆಯುತ್ತಿರುವುದರಿಂದ ಆರೋಪಿಗೆ ನನ್ನ ಬಳಿ ಸಾಲ ಮಾಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಮತ್ತು ಆರೋಪಿಯ ನಡುವೆ ನಡೆಯುವ ಹಣದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ನನ್ನ ಮಗಳ ಬಳಿ ಚೀಟಿ ಹಾಕಿದ್ದರಿಂದ ಸದರಿ ಚೀಟಿ ಹಣವನ್ನು ಪಾವತಿಸಲು ಆರೋಪಿಯು ಪ್ರತಿ ತಿಂಗಳು ನನ್ನ ಮಗಳ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಸದರಿ ಚೀಟಿ ಹಣದ ವ್ಯವಹಾರದ ಭದ್ರತೆಗಾಗಿ ನನ್ನ ಮಗಳಿಗೆ ನೀಡಿದ್ದ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪಿರ್ಯಾದಿಯಲ್ಲಿ ಹೇಳಿದಂತೆ ಆರೋಪಿಗೆ ಯಾವುದೇ ಹಣವನ್ನು ಸಾಲವಾಗಿ ನೀಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಆರೋಪಿಯು ನನಗೆ ಯಾವುದೇ ಹಣವನ್ನು ಮರು ಪಾವತಿಸುವ ಬಾಧ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಕಾನೂನು ಬಾಹಿರವಾಗಿ ಹಣವನ್ನು ವಸೂಲಿ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ